# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ಚೌಕ, ಬೆಂಗಳೂರು-560 002

**ಪತ್ರಿಕಾ ಪ್ರಕಟಣೆ** **ದಿನಾಂಕ:06.08.2020**

**<u>ಪೂಜ್ಯ ಮಹಾಪೌರರು ರವರಿಂದ ಖಾಸಗಿ ಆಸ್ಪತ್ರೆಗಳ ಅನಿರೀಕ್ಷಿತ ತಪಾಸಣೆ ನಡೆಸಿರುವ ಬಗ್ಗೆ:</u>**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಕೆಲ ಖಾಸಗಿ ಆಸ್ಪತ್ರೆಗಳಿಗೆ ಪೂಜ್ಯ ಮಹಾಪೌರರು ರವರು ಇಂದು ಕೆಲ ಆಸ್ಪತ್ರೆಗಳಿಗೆ ಅನಿರೀಕ್ಷಿತ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಸದರಿ ವೇಳೆ ಮಾನ್ಯ ಉಪಮಹಾಪೌರರು ಶ್ರೀ ರಾಮಮೋಹನ ರಾಜು, ಆಡಳಿತ ಪಕ್ಷದ ನಾಯಕರು ಶ್ರೀ ಮುನೀಂದ್ರ ಕುಮಾರ್, ಆರೋಗ್ಯ ಸ್ಥಾಯಿ ಸಮಿತಿ ಅಧ್ಯಕ್ಷರು ಶ್ರೀ ಮಂಜುನಾಥ್ ರಾಜು.ಜಿ, ಮುಖ್ಯ ಆರೋಗ್ಯ ಅಧಿಕಾರಿ ಡಾ. ವಿಜೇಂದ್ರ ಹಾಗೂ ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ಸೆಂ. ಮಾರ್ಥಾಸ್ ಆಸ್ಪತ್ರೆ, ವಿಕ್ರಮ್ ಆಸ್ಪತ್ರೆಗೆ, ಏಸ್ಟರ್ ಸಿಎಂಐ ಆಸ್ಪತ್ರೆಗಳಿಗೆ ಭೇಟಿ ನೀಡಿ ಆಸ್ಪತ್ರೆ ಮೇಲ್ವಿಚಾರಕರ ಜೊತೆ ಮಾತನಾಡಿದ ಮಹಾಪೌರರು, ಬಿಬಿಎಂಪಿ ವ್ಯಾಪ್ತಿಯಲ್ಲಿ ಕೋವಿಡ್-19 ಸೋಂಕು ನಿಯಂತ್ರಿಸಲು ಎಲ್ಲರೂ ಕೈಜೋಡಿಸಿ ಒಟ್ಟಿಗೆ ಶ್ರಮವಹಿಸಿ ಕಾರ್ಯನಿರ್ವಹಿಸಬೇಕಿದ್ದು, ಕೋವಿಡ್-19 ಸೋಂಕಿತರಾಗಲಿ ಅಥವಾ ಸಾಮನ್ಯ ಕಾಯಿಲೆಯಿಂದ ಬಳಲುತ್ತಿರುವರಾಗಲಿ ಆಸ್ಪತ್ರೆಗೆ ಬಂದರೆ ಅವರಿಗೆ ಕೂಡಲೆ ಸ್ಪಂದಿಸಿ ಚಿಕಿತ್ಸೆ ನೀಡುವಂತೆ ಪೂಜ್ಯ ಮಹಾಪೌರರು ಕೈ ಮುಗಿದು ಮನವಿ ಮಾಡಿದರು.

ನಾಗರಿಕರಿಗೆ ಅನುಕೂಲವಾಗುವ ದೃಷ್ಟಿಯಲ್ಲಿ ಖಾಸಗಿ ಆಸ್ಪತ್ರೆಗಳಲ್ಲಿ ಕೂಡಲೆ ನಾಗರಿಕ ಸಹಾಯ ಕೇಂದ್ರ(CSD) ತೆರೆಯಲು ಕ್ರಮ ವಹಿಸುವಂತೆ ಮುಖ್ಯ ಆರೋಗ್ಯಾಧಿಕಾರಿಗೆ ಮಹಾಪೌರರು ಸೂಚನೆ ನೀಡಿದರು. ಅಲ್ಲದೆ ಎಲ್ಲಾ ಖಾಸಗಿ ಆಸ್ಪತ್ರೆಯಲ್ಲಿ ಹಾಸಿಗೆ ಸಾಮರ್ಥ್ಯ ವಿರುವ, ದಾಖಲಾಗಿರುವ, ಹಾಸಿಗೆಗಳು ಲಭ್ಯವಿರುವ ನಿಖರ ಮಾಹಿತಿಯನ್ನು ರಿಯಲ್ ಟೈಮ್ ಡಿಜಿಟಲ್ ಬೋರ್ಡ್ ಅಳವಡಿಸುವಂತೆ ಕ್ರಮವಹಿಸಲು ಅಧಿಕಾರಿಗಳಿಗೆ ಸೂಚನೆ ನೀಡಿದರು. ಸರ್ಕಾರದ ನಿಯಮಗಳಂತೆ ಶೇ.50 ರಷ್ಟು ಹಾಸಿಗೆ ಕೊಡದಿದ್ದಲ್ಲಿ ವಿಪತ್ತು ನಿರ್ವಹಣಾ ಕಾಯ್ದೆ ಅಡಿ ಕಾನೂನು ಕ್ರಮ ಕೈಗೊಳ್ಳಲಾಗುವುದು.

**ಸೆಂ. ಮಾರ್ಥಾಸ್ ಆಸ್ಪತ್ರೆಗೆ ಭೇಟಿ:**

ಮೊದಲಿಗೆ ಪಾಲಿಕೆ ಕೇಂದ್ರ ಕಛೇರಿ ಹತ್ತಿರವಿರುವ ಸೆಂ. ಮಾರ್ಥಾಸ್ ಆಸ್ಪತ್ರೆಗೆ ಭೇಟಿ ನೀಡಿ ಒಟ್ಟು ಹಾಸಿಗೆಗಳು ಲಭ್ಯವಿರುವ, ಸರ್ಕಾರಿ ಮತ್ತು ಖಾಸಗಿ ರೋಗಿಗಳಿಗೆ ಕಾಯ್ದಿರಿಸುವ ಹಾಸಿಗೆಗಳ ಮಾಹಿತಿಯ ಚಾರ್ಟ್ ಅನ್ನು ಮಹಾಪೌರರು ಪರಿಶೀಲನೆ ನಡೆಸಿದರು. ನಂತರ ಆಡಳಿತ ಮಂಡಳಿ ಜೊತೆ ಚರ್ಚಿಸಿ, ಪಾಲಿಕೆವತಿಯಿಂದ ಏನಾದರು ಸಹಕಾರ ಬೇಕಿದ್ದಲ್ಲಿ ಕೇಳಿ ಎಂದು ತಿಳಿಸಿದರು. ಅದಕ್ಕೆ ಆಸ್ಪತ್ರೆ ಮೇಲ್ವಿಚಾರಕರು ಪ್ರತಿಕ್ರಿಯಿಸಿ, ಈಗಾಗಲೇ ಕೆಲ ಕೋವಿಡ್ ಸೋಂಕಿತರು ಗುಣಮುಖರಾಗಿ ಮನೆಗಳಿಗೆ ತೆರಳಿದ್ದಾರೆ. ಆದರೆ, ವೆಬ್ ಪೋರ್ಟಲ್ ನಲ್ಲಿ ಮಾತ್ರ ಗುಣಮುಖರಾಗಿ ಬಿಡುಗಡೆಗೊಂಡಿರುವ ಮಾಹಿತಿಯನ್ನು ನಮೂದಿಸಿಲ್ಲ. ಅದನ್ನು ಸರಿಪಡಿಸುವಂತೆ ಮನವಿ ಮಾಡಿದರು. ಆ ಲೋಪದೋಶವನ್ನು ಕೂಡಲೆ ಸರಿಪಡಿಸುವಂತೆ ಮಹಾಪೌರರು ಮುಖ್ಯ ಆರೋಗ್ಯಾಧಿಕಾರಿಗೆ ತಿಳಿಸಿದರು. ಜೊತೆಗೆ ಹೆಲ್ಪ್ ಡೆಸ್ಕ್ ಅನ್ನು ಕೂಡಲೆ ಸ್ಥಾಪಿಸುವಂತೆ ಸೂಚಿಸಿದರು.

**ವಿಕ್ರಮ್ ಆಸ್ಪತ್ರೆಗೆ ಭೇಟಿ:**

ಕನ್ನಿಂಗ್ ಹ್ಯಾಂ ರಸ್ತೆ ಮಾರ್ಗದಲ್ಲಿರುವ ವಿಕ್ರಮ್ ಆಸ್ಪತ್ರೆಗೆ ಭೇಟಿ ನೀಡಿ, ಕೋವಿಡ್-19 ಸೋಂಕಿತರನ್ನು ಆರೈಕೆ ಮಾಡುವ ವ್ಯವಸ್ಥೆ ಕುರಿತು ಅಲ್ಲಿನ ಸಿಬ್ಬಂದಿ ಬಳಿ ಮಹಾಪೌರರು ಚರ್ಚಿಸಿದರು. ಬಳಿಕ ಗಂಟಲು ಮಾದರಿ ಸಂಗ್ರಹ(ಸ್ವಾಬ್ ಕಲೆಕ್ಟ್) ಪರೀಕ್ಷೆಗೆ ಎಷ್ಟು ಹಣ ಪಡೆಯುತ್ತೀರ ಎಂದು ಪ್ರಶ್ನಿಸಿದರು. ಅದಕ್ಕೆ ಸರ್ಕಾದ ನಿಗದಿಪಡಿಸಿರುವಂತೆ ೩,೦೦೦ ರೂ.ಗಳನ್ನು ಮಾತ್ರ ಪಡೆಯಲಾಗುತ್ತಿದೆ ಎಂದು ಆಸ್ಪತ್ರೆ ಸಿಬ್ಬಂದಿಯೊಬ್ಬರು ತಿಳಿಸಿದರು.

ಆಸ್ಪತ್ರೆಗೆ ಬರುವ ಸಾರ್ವಜನಿಕರಿಗೆ ಯಾವುದೇ ರೀತಿಯ ತೊಂದರೆಯಾಗಬಾರದು. ಕೋವಿಡ್ ಸೋಂಕು ಎಂದರೆ ಎಲ್ಲರಿಗೂ ಗಾಭರಿಪಡುವಂತಹ ವಾತಾವರಣ ನಿರ್ಮಾಣವಾಗಿದೆ. ಈ ಸಂಬಂಧ ಸಾರ್ವಜನಿಕರಲ್ಲಿ ಹೆಚ್ಚು ಹರಿವು ಮೂಡಿಸಬೇಕಿದೆ. ಆದ್ದರಿಂದ ಖಾಸಗಿ ಆಸ್ಪತ್ರೆಗಳಲ್ಲಿ ನಾಗರಿಕ ಸಹಾಯ ಕೇಂದ್ರಗಳನ್ನು ತೆರೆಯಲಾಗುತ್ತಿದ್ದು, ಅದನ್ನು ಕೂಡಲೆ ವ್ಯವಸ್ಥೆ ಮಾಡುವಂತೆ ಮಹಾಪೌರರು ಮುಖ್ಯ ಆರೋಗ್ಯಾಧಿಕಾರಿಗೆ ಸೂಚನೆ ನೀಡಿದರು.

**ಏಸ್ಟರ್ ಸಿಎಂಐ ಆಸ್ಪತ್ರೆಗೆ ಭೇಟಿ:**

ಕೊನೆಯದಾಗಿ ಏಸ್ಟರ್ ಸಿಎಂಐ ಆಸ್ಪತ್ರೆಗೆ ಭೇಟಿ ನೀಡಿ ತಪಾಸಣೆ ನಡೆಸಿದ ಮಹಾಪೌರರು, ಯಾರೇ ಚಿಕಿತ್ಸೆಗೆ ಬಂದರು ಮೊದಲು ಚಿಕಿತ್ಸೆ ನೀಡಬೇಕು. ಯಾರೊಬ್ಬರೂ ಹಿಂದೆ ಕಳುಹಿಸಬಾರದು. ಫೀವರ್ ಕ್ಲಿನಿಕ್ ನಲ್ಲಿ ಸರ್ಕಾರ ನಿಗದಿಪಡಿಸಿರುವ ದರವನ್ನು ಮಾತ್ರ ಸಂಗ್ರಹಿಸಬೇಕು ಎಂದು ಸೂಚಿಸಿದರು. ಸರ್ಕಾರದ ವತಿಯಿಂದ ನಿಯೋಜನೆ ಮಾಡಿರುವ ನೋಡಲ್ ಅಧಿಕಾರಿ ಬಳಿ ಮಾತನಾಡಿ, ಇಲ್ಲಿ ಯಾವುದೇ ಸಮಸ್ಯೆ ಆಗದಂತೆ ನೋಡಿಕೊಳ್ಳಬೇಕು. ಹಸಿಗೆಗಳು ಲಭ್ಯವಿರುವ ಬಗ್ಗೆ ಸಾರ್ವಜನಿಕರಿಗೆ ನಿಖರ ಮಾಹಿತಿ ನೀಡಬೇಕು. ಯಾವುದೇ ತೊಡಕಾಗಬಾರದು ಎಂದು ತಿಳಿಸಿದರು.

**ಈ ವಿಷಯವನ್ನು ತಮ್ಮ ಮಾಧ್ಯಮದಲ್ಲಿ ಪ್ರಕಟಿಸಲು ಕೋರಿದೆ.**

**ಸಾರ್ವಜನಿಕ ಸಂಪರ್ಕಾಧಿಕಾರಿ**